## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ವಿಕಲಚೇತನ ವ್ಯಕ್ತಿಗಳೊಡನೆ ವಿವಾಹ ಏರ್ಪಡುವ ಪ್ರಕರಣಗಳಲ್ಲಿ, ವಿಕಲಚೇತನ ವ್ಯಕ್ತಿಯ ಹೆಸರಿನಲ್ಲಿ ರೂ.50,000/-ಗಳನ್ನು ಹೂಡಿಕೆಯ ರೂಪದಲ್ಲಿ ನೀಡುವ ಬಗ್ಗೆ.

ಓದಲಾಗಿದೆ: ನಿರ್ದೇಶಕರು, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ,ಬೆಂಗಳೂರು ಇವರ ಪತ್ರ ಸಂಖ್ಯೆ:ವಿಹಿನಾಸಇ/ಯೋಜನೆ/ವಿ.ವಿ/10/ 2013-14/1365, ದಿನಾಂಕ: 24-7-2013.

ಪ್ರಸ್ತಾವನೆ:

ಮೇಲೆ ಓದಲಾದ ದಿನಾಂಕ: 24-7-2013ರ ಪತ್ರದಲ್ಲಿ, ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರು, ಮಾನ್ಯ ಮುಖ್ಯ ಮಂತ್ರಿಯವರು ದಿನಾಂಕ:12-7-2013ರಂದು ಮಂಡಿಸಿರುವ 2013-14ನೇ ಸಾಲಿನ ಆಯವ್ಯಯ ಭಾಷಣದ ಕ್ರಮಸಂಖ್ಯೆ: 230ರಲ್ಲಿ, 'ವಿಕಲಚೇತನ ವ್ಯಕ್ತಿಗಳೊಡನೆ ವಿವಾಹ ಏರ್ಪಡುವ ಪ್ರಕರಣಗಳಲ್ಲಿ ಅವರಿಗೆ ನಿರಂತರವಾಗಿ ಮಾಸಿಕ ಆದಾಯ ದೊರಕಿಸಲು ವಿಕಲಚೇತನರ ವ್ಯಕ್ತಿಯ ಹೆಸರಿನಲ್ಲಿ ರೂ.50,000/- ಗಳನ್ನು ಹೂಡಿಕೆಯ ರೂಪದಲ್ಲಿ ನೀಡಲಾಗುವುದೆಂದು' ಘೋಷಣೆ ಮಾಡಿರುವರು.

ಇತ್ತೀಚಿನ ದಿನಗಳಲ್ಲಿ ವಿಕಲಚೇತನ ಯುವಕ/ಯುವತಿಯರನ್ನು ಸಾಮಾನ್ಯ ವ್ಯಕ್ತಿಗಳು ವಿವಾಹವಾಗುವ ಬಗ್ಗೆ ನಿರ್ಲಕ್ಷತೆ ತೋರುತ್ತಿರುವರು. ಇದರಿಂದ ವಿಕಲಚೇತನರು ವೈವಾಹಿಕ ಜೀವನದಿಂದ ವಂಚಿತರಾಗುತ್ತಿದ್ದು ಇದರಿಂದ ಮಾನಸಿಕವಾಗಿ ತೊಂದರೆ ಅನುಭವಿಸುತ್ತಿರುವರು. ವಿಕಲಚೇತನರು ಸಹ ಸಾಮಾನ್ಯರಂತೆ ವೈವಾಹಿಕ ಜೀವನವನ್ನು ಸಾಗಿಸಲು ಸಾಧ್ಯವಾಗುತ್ತಿಲ್ಲ. ಈ ನಿಟ್ಟಿನಲ್ಲಿ ವಿಕಲಚೇತನ ಯುವಕ/ಯುವತಿಯರನ್ನು ಸಾಮಾನ್ಯ ವ್ಯಕ್ತಿಗಳು ಮದುವೆಯಾಗುವುದಕ್ಕೆ ಪ್ರೋತ್ಸಾಹ ನೀಡುವುದರಿಂದ ಹೆಚ್ಚು ಹೆಚ್ಚು ಸಾಮಾನ್ಯ ವ್ಯಕ್ತಿಗಳು ವಿಕಲಚೇತನ ವ್ಯಕಿಗಳನ್ನು ವಿವಾಹವಾಗಲು ಮುಂದೆ ಬಂದು ವಿಕಲಚೇತನರು ವೈವಾಹಿಕ ಜೀವನ ಸುಗುಮವಾಗಿ ನಡೆಸಲು ಅನುಕೂಲವಾಗುತ್ತದೆ.

ಆದುದರಿಂದ 2013-14 ನೇ ಸಾಲಿನಿಂದ ವಿಕಲಚೇತನ ಯುವಕ/ಯುವತಿಯರನ್ನು ವಿವಾಹವಾಗುವ ಸಾಮಾನ್ಯ ಯುವಕ/ಯುವತಿಯರಿಗೆ ನಿರಂತರವಾಗಿ ಮಾಸಿಕ ಆದಾಯ ದೊರಕಿಸಲು ವಿಕಲಚೇತನರ ವ್ಯಕ್ತಿಯ ಹೆಸರಿನಲ್ಲಿ ರೂ.50,000/- ಗಳನ್ನು ಹೂಡಿಕೆಯ ರೂಪದಲ್ಲಿ ನೀಡಿ ಪ್ರೋತ್ಸಾಹ ನೀಡಲು ಹಾಗೂ ಅದರಿಂದ ಬರುವ ಬಡ್ಡಿ ಹಣವನ್ನು ಭತ್ಯೆಯಾಗಿ ಮದುವೆಯಾದ ಸಾಮಾನ್ಯ ವ್ಯಕ್ತಿ ಪಡೆಯಲು ಅನುವಾಗುವಂತೆ ಯೋಜನೆಯನ್ನು ಅನುಷ್ಠಾನಗೊಳಿಸಲು ಆಡಳಿತಾತ್ಮಕ ಮಂಜೂರಾತಿಯನ್ನು ನೀಡುವಂತೆ ಕೋರಿರುತ್ತಾರೆ.

ಮುಂದುವರೆಸುತ್ತಾ, ಪ್ರಸಕ್ತ ವರ್ಷದಲ್ಲಿ ಒಂದು ಪ್ರಕರಣಕ್ಕೆ ರೂ.50,000/-ಗಳಂತೆ 300 ವಿಕಲಚೇತನ ಯುವಕ/ಯುವತಿಯರಿಗೆ ಪ್ರಯೋಜನ ಕಲ್ಪಿಸಲು ಉದ್ದೇಶಿಸಿದ್ದು ಒಟ್ಟು ರೂ.150.00 ಲಕ್ಷಗಳ ಆಯವ್ಯಯದ ಅವಶ್ಯಕತೆ ಇದ್ದು, ಸದರಿ ಆಯವ್ಯಯವನ್ನು ಲೆಕ್ಕಶೀರ್ಷಿಕೆ:2235-02-101-0-52 ಯೋಜನೆ ಉಪ ಲೆಕ್ಕ ಶೀರ್ಷಿಕೆ 051 ರಡಿ ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಮಮಇ 261 ಪಿಹೆಚ್‌ಪಿ 2013, ಬೆಂಗಳೂರು**

**ದಿನಾಂಕ:28-8-2013**

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, 2013-14 ನೇ ಸಾಲಿನಿಂದ ವಿಕಲಚೇತನ ಯುವಕ/ ಯುವತಿಯರನ್ನು ವಿವಾಹವಾಗುವ ಸಾಮಾನ್ಯ ಯುವಕ/ ಯುವತಿಯರಿಗೆ ನಿರಂತರವಾಗಿ ಮಾಸಿಕ ಆದಾಯ ದೊರಕಿಸಲು ವಿಕಲಚೇತನರ ವ್ಯಕ್ತಿಯ ಹೆಸರಿನಲ್ಲಿ ರೂ.50,000/- ಗಳನ್ನು (ಐವತ್ತು ಸಾವಿರ ರೂಪಾಯಿಗಳನ್ನು ಮಾತ್ರ) ಹೂಡಿಕೆಯ ರೂಪದಲ್ಲಿ ನೀಡಿ ~~ಪ್ರೋತ್ಸಾಹ ನೀಡಲು~~ ಹಾಗೂ ಅದರಿಂದ ಬರುವ ಬಡ್ಡಿ ಹಣವನ್ನು ಭತ್ಯೆಯಾಗಿ ವಿಕಲಚೇತನರನ್ನು ಮದುವೆಯಾದ ಸಾಮಾನ್ಯ

..2

ಸಂಖ್ಯೆ 5256
ದಿನಾಂಕ 31.8.2013

Kiran Raghupathi Vice President KSPSTA

ವ್ಯಕ್ತಿ ಪಡೆಯುವ ಯೋಜನೆಗೆ ಅನುಬಂಧ-1 ರಲ್ಲಿ ವಿಧಿಸಿರುವ ಷರತ್ತು ಹಾಗೂ ಮಾರ್ಗಸೂಚಿಗಳಿಗೊಳಪಟ್ಟು ಮತ್ತು ಅನುಬಂಧ-2 ರಂತೆ ವಿಕಲಚೇತನ ವಿವಾಹ ದೃಢೀಕರಣ ಪತ್ರವನ್ನು ಸಲ್ಲಿಸುವ ಷರತ್ತಿಗೊಳಪಟ್ಟು ಆಡಳಿತಾತ್ಮಕ ಮಂಜೂರಾತಿಯನ್ನು ನೀಡಿದೆ.

2013-14ನೇ (ಪರಿಷ್ಕೃತ) ಸಾಲಿಗೆ ಒಂದು ಪ್ರಕರಣಕ್ಕೆ ರೂ.50,000/-ಗಳಂತೆ 300 ವಿಕಲಚೇತನ ಯುವಕ/ಯುವತಿಯರಿಗೆ ಪ್ರಯೋಜನ ಕಲ್ಪಿಸಲು ಉದ್ದೇಶಿಸಿದ್ದು ಒಟ್ಟು ರೂ.150.00 ಲಕ್ಷಗಳ (ಒಂದು ನೂರ ಐವತ್ತು ಲಕ್ಷಗಳು ಮಾತ್ರ) ಆಯವ್ಯಯವನ್ನು ಲೆಕ್ಕಶೀರ್ಷಿಕೆ:2235-02-101-0-99 (ಯೋಜನೆ) ಉಪ ಲೆಕ್ಕ ಶೀರ್ಷಿಕೆ (100) ಧನಸಹಾಯ ಪರಿಹಾರದಡಿ ಭರಿಸತಕ್ಕದ್ದು. ಉದ್ದೇಶಿತ ಗುಂಪುಗಳಿಗೆ ಯೋಜನೆ ಕುರಿತಂತೆ ವ್ಯಾಪಕ ಪ್ರಚಾರ ನೀಡುವ ಸಂಬಂಧ ಇಲಾಖೆಯು ಪ್ರಚಾರಕ್ಕೆ ಅಗತ್ಯವಿರುವ ಹಣವನ್ನು ಈ ಅನುದಾನದಿಂದಲೇ ಭರಿಸತಕ್ಕದ್ದು.

ಈ ಆದೇಶವನ್ನು ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ:ಪಿಡಿ 40 ಐಎಂಎಂ 2013 ದಿನಾಂಕ:17.8.2013 ಮತ್ತು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 562 ವೆಚ್ಚ-3 2013, ದಿನಾಂಕ:28.08.2013ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಬಿ.ಕಮಲಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ.

ಇವರಿಗೆ:

1) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು
2) ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
3) ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಬೆಂಗಳೂರು.
4) ಎಲ್ಲಾ ಜಿಲ್ಲಾಧಿಕಾರಿಗಳು. (ನಿರ್ದೇಶಕರ ಮುಖಾಂತರ) Kiran Raghupathi Vice President KSPSTA
5) ಎಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು,ಜಿಲ್ಲಾ ಪಂಚಾಯತ್. (ನಿರ್ದೇಶಕರ ಮುಖಾಂತರ)
6) ಖಜಾನಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ.
7) ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿಗಳು.

Kiran Raghupathi Vice President KSPSTA

**ಸರ್ಕಾರದ ಆದೇಶ ಸಂಖ್ಯೆ: ಮಮಇ 261 ಪಿಹೆಚ್‌ಪಿ 2013, ದಿನಾಂಕ:28.08.2013 ಕ್ಕೆ ಅನುಬಂಧ–1**

**ವಿಕಲಚೇತನ ವ್ಯಕ್ತಿಗಳನ್ನು ವಿವಾಹವಾಗುವ ಸಾಮಾನ್ಯ ವ್ಯಕ್ತಿಗಳಿಗೆ ಪ್ರೋತ್ಸಾಹ ಧನ ನೀಡುವ ಬಗ್ಗೆ ಈ ಕೆಳಗಿನಂತೆ ಷರತ್ತು ಹಾಗೂ ಮಾರ್ಗಸೂಚಿಗಳು.**

1. ವಿಕಲಚೇತನರು ಮತ್ತು ಸಾಮಾನ್ಯ ವ್ಯಕ್ತಿಗಳು ಭಾರತದ ಪ್ರಜೆಯಾಗಿರಬೇಕು. ಹಾಗೂ ಇವರು ಕರ್ನಾಟಕದಲ್ಲಿ ಕನಿಷ್ಠ ಹಿಂದಿನ 10 ವರ್ಷಗಳು ವಾಸವಾಗಿರಬೇಕು.
2. ವಿಕಲಚೇತನ ವ್ಯಕ್ತಿಗಳೊಡನೆ ವಿವಾಹವಾಗುವ ಸಾಮಾನ್ಯ ವ್ಯಕ್ತಿಗಳಿಗೆ ಯಾವುದೇ ಆದಾಯ ಮಿತಿ ಇರುವುದಿಲ್ಲ.
3. ವಿವಾಹವಾಗುವ ಯುವತಿಯರ ವಯಸ್ಸು 18 ಹಾಗೂ ಯುವಕರ ವಯಸ್ಸು 21 ವರ್ಷಕ್ಕಿಂತ ಮೇಲ್ಪಟ್ಟಿರಬೇಕು.
4. ಈ ಯೋಜನೆಯಡಿ ಸೌಲಭ್ಯ ಪಡೆಯುವ ವಿಕಲಚೇತನ ವ್ಯಕ್ತಿಗಳು/ಸಾಮಾನ್ಯ ವ್ಯಕ್ತಿಗಳು 2ನೇ ಮದುವೆ ಮಾಡಿಕೊಂಡಲ್ಲಿ ಈ ಸೌಲಭ್ಯ ಪಡೆಯಲು ಅರ್ಹರಿರುವುದಿಲ್ಲ.
5. ನೀಡಲಾಗುವ ಧನಸಹಾಯವನ್ನು ಐದು ವರ್ಷಗಳ ಅವಧಿಗೆ ಬ್ಯಾಂಕಿನಲ್ಲಿ ಠೇವಣಿ ರೂಪದಲ್ಲಿ ಇಡತಕ್ಕದ್ದು. ಹಾಗೂ ಈ ಠೇವಣಿಯಿಂದ ಬಂದ ಬಡ್ಡಿ ಹಣವನ್ನು ಯುವಕ/ಯುವತಿಯರು ಅವರ ಜೀವನ ನಿರ್ವಹಣೆಗೆ ಉಪಯೋಗಿಸತಕ್ಕದ್ದು. 5 ವರ್ಷದ ನಂತರ ಪೂರ್ಣ ಹಣ ಪಡೆಯಬಹುದು ಅಥವಾ ಮುಂದುವರೆಸುವುದು ಫಲಾನುಭವಿಯ ಇಚ್ಛೆಗೆ ಒಳಪಟ್ಟಿದೆ.
6. ವಿಕಲಚೇತನರ ಯುವಕ/ಯುವತಿಯರ ವಿಕಲಚೇತನತೆಯ ಪ್ರಮಾಣ ಶೇ.40%ಕ್ಕಿಂತ ಹೆಚ್ಚಾಗಿರತಕ್ಕದ್ದು.
7. ವಿವಾಹವಾಗುವ ಯುವಕ/ಯುವತಿಯರು ಕಡ್ಡಾಯವಾಗಿ ಸಂಬಂಧಪಟ್ಟವರಿಂದ ಪಡೆದ ವಾಸಸ್ಥಳ ದೃಢೀಕರಣ ಪತ್ರ ನೀಡತಕ್ಕದ್ದು.
8. ವಿವಾಹವನ್ನು ವಿವಾಹ ನೊಂದಣಾಧಿಕಾರಿಗಳ ಕಛೇರಿಯಲ್ಲಿ ಕಡ್ಡಾಯವಾಗಿ ನೊಂದಾಯಿಸತಕ್ಕದ್ದು.
9. ಪ್ರೋತ್ಸಾಹ ಧನವನ್ನು ಮಂಜೂರು ಮಾಡುವ ಪ್ರಾಧಿಕಾರವು ಆಯಾ ಜಿಲ್ಲೆಯ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳದ್ದಾಗಿರುತ್ತದೆ.
10. ಈ ಸೌಲಭ್ಯವು ಆದೇಶ ಹೊರಡಿಸಿದ ದಿನಾಂಕದಿಂದ ಮದುವೆ ಆಗುವ ಪ್ರಕರಣಗಳಿಗೆ ಅನ್ವಯಿಸುವುದು.

(ಬಿ.ಕಮಲಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ.

ಕರ್ನಾಟಕ ಸರ್ಕಾರ
ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬೆಂಗಳೂರು.
ವಿಕಲಚೇತನರ ವ್ಯಕ್ತಿಗಳನ್ನು ವಿವಾಹವಾಗುವ ಸಮಾನ್ಯ ವ್ಯಕ್ತಿಗಳಿಗೆ ಪ್ರೋತ್ಸಾಹ ಧನ ಮಂಜೂರಾತಿಗಾಗಿ ಅರ್ಜಿ

ನವ ದಂಪತಿಗಳ ಭಾವಚಿತ್ರ

ವರ್ಷ:20 –20

| | | |
|---|---|---|
| 1 | ವಿಕಲಚೇತನ ವ್ಯಕ್ತಿಯೊಡನೆ ವಿವಾಹವಾಗುವ ಸಾಮಾನ್ಯ ವ್ಯಕ್ತಿಯ ಹೆಸರು | |
| 2 | ಲಿಂಗ | |
| 3 | ಹುಟ್ಟಿದ ದಿನಾಂಕ | |
| 4 | ತಂದೆ/ತಾಯಿ/ಪೋಷಕರ ಹೆಸರು | |
| 5 | ಅಂಚೆ ವಿಳಾಸ | ಗ್ರಾಮ/ಬೀದಿ<br>ತಾಲ್ಲೂಕು: ಜಿಲ್ಲೆ:<br>ಪಿನ್ |
| 6 | ಖಾಯಂ ವಿಳಾಸ | ಗ್ರಾಮ/ಬೀದಿ<br>ತಾಲ್ಲೂಕು: ಜಿಲ್ಲೆ:<br>ಪಿನ್ |
| 7 | ವಿಕಲ ಚೇತನ ವ್ಯಕ್ತಿಯ ಹೆಸರು | |
| 8 | ಲಿಂಗ | |
| 9 | ಹುಟ್ಟಿದ ದಿನಾಂಕ | |
| 10 | ತಂದೆ/ತಾಯಿ/ಪೋಷಕರ ಹೆಸರು | |
| 11 | ಅಂಚೆ ವಿಳಾಸ | |
| 12 | ಖಾಯಂ ವಿಳಾಸ | |
| 13 | ಉದ್ಯೋಗ | ತಾಲ್ಲೂಕು: ಜಿಲ್ಲೆ:<br>ಪಿನ್ |
| 14 | ಕರ್ನಾಟಕದಲ್ಲಿ ಎಷ್ಟು ವರ್ಷಗಳಿಂದ ವಾಸವಾಗಿರುತ್ತೀರಿ. | |
| 15 | ವಿವಾಹ ನೊಂದಣಿಯಾದ ಬಗ್ಗೆ ನೊಂದಣಿ ಅಧಿಕಾರಿಗಳ ದೃಢೀಕರಣ ಪತ್ರ ಸಂಖ್ಯೆ/ದಿನಾಂಕ (ದೃಢೀಕರಣ ಪ್ರತಿ ಲಗತ್ತಿಸುವುದು.) | |
| 16 | ವಿಕಲಚೇತನ ವ್ಯಕ್ತಿ/ ಬ್ಯಾಂಕ್ ಖಾತೆ ಸಂಖ್ಯೆ | |
| 17 | ಷೆಡ್ಯೂಲ್ ಬ್ಯಾಂಕಿನ ಹೆಸರು | |
| 18 | ಬ್ಯಾಂಕ್ ಶಾಖೆಯ ಹೆಸರು | |
| 19 | ಬ್ಯಾಂಕಿನ **NEFT** ಕೋಡ್ ಅಥವಾ **IFSC:** ಕೋಡ್: | **NEFT** ಕೋಡ್:<br>**IFSC:** ಕೋಡ್: |

::ಘೋಷಣೆ::

ಶ್ರೀಮತಿ/ಶ್ರೀ____________________ತಂದೆ/ತಾಯಿ/ಪೋಷಕರು____________________ಆದ ನಾನು/ನಾವು ಪ್ರಮಾಣೀಕರಿಸುವುದೇನೆಂದತೆ, ಮೇಲಿನ ವಿಷಯಗಳು ನನಗೆ ತಿಳಿಸ ಮಟ್ಟಿಗೆ ಸತ್ಯವಾಗಿರುತ್ತದೆ. ಒಂದು ವೇಳೆ ಮೇಲೆ ತಿಳಿಸಿರುವ ಮಾಹಿತಿಯು ಸುಳ್ಳು ಎಂದು ಕಂಡು ಬಂದಲ್ಲಿ ಕಾನೂನು ರೀತ್ಯಾ ಕ್ರಮ ಜರುಗಿಸಬಹುದು ಎಂಬುದಾಗಿ ಒಪ್ಪಿರುತ್ತೇನೆ.

ದಿನಾಂಕ:________________ ಫಲಾನುಭವಿಯ ಸಹಿ:

17/New Scheme 2013/J

## ಗೆಜೆಟೆಡ್ ಅಧಿಕಾರಿಯ ದೃಢೀಕರಣ

ಶ್ರೀಮತಿ/ಶ್ರೀ ತಂದೆ/ಪೋಷಕ ರವರು ನನಗೆ ಪರಿಚಿತರಾಗಿದ್ದು ಹಾಗೂ ಸಾಮಾನ್ಯ ವ್ಯಕ್ತಿಯಾಗಿದ್ದು ದಿನಾಂಕ: ರಂದು ಅಂಗವಿಕಲ ವ್ಯಕ್ತಿಯಾದ ಶ್ರೀ/ಶ್ರೀಮತಿ ರವರನ್ನು ವಿವಾಹವಾಗಿರುತ್ತಾರೆಂದು ದೃಢೀಕರಿಸಿದೆ.

ಸ್ಥಳ:

ದಿನಾಂಕ: ಗೆಜೆಟೆಡ್ ಅಧಿಕಾರಿಯ ಸಹಿ

ವಿವಾಹವಾಗುವ ಸಾಮಾನ್ಯ ವ್ಯಕ್ತಿಯ ಹೆಸರು: